**ಕರ್ನಾಟಕ ಸರ್ಕಾರ**

**ಕಾಲೇಜು ಶಿಕ್ಷಣ ಇಲಾಖೆ**

ಸಂಖ್ಯೆ:ಕಾಶಿಇ/85/ಮ.ಲೇ.ಆ./2017-18/ಸೇವಿ-1

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ
ಬೆಂಗಳೂರು, ದಿನಾಂಕ:27-10-2018.

ಇವರಿಗೆ:

ಪ್ರಾದೇಶಿಕ ಜಂಟಿ ನಿರ್ದೇಶಕರು,
ಕಾಲೇಜು ಶಿಕ್ಷಣ ಇಲಾಖೆ,
**ಬೆಂಗಳೂರು, ಮೈಸೂರು, ಶಿವಮೊಗ್ಗ,**
**ಮಂಗಳೂರು, ಧಾರವಾಡ ಹಾಗೂ ಕಲಬುರಗಿ.**

**ನೆನಮೋಲೆ-2**

ಮಾನ್ಯರೆ,

ವಿಷಯ: **ಅನುದಾನಿತ ಕಾಲೇಜುಗಳಲ್ಲಿ ಸಕ್ರಮಾತಿಗೊಂಡ ಸ್ಟಾಪ್ ಗ್ಯಾಪ್ ಉಪನ್ಯಾಸಕರುಗಳಿಗೆ ಯುಜಿಸಿ ವೇತನ ಶ್ರೇಣಿಗಳನ್ನು ವಿಸ್ತರಿಸುವ ಬಗ್ಗೆ.**

ಉಲ್ಲೇಖ: 1. ಮಹಾಲೇಖಪಾಲರ ಆಕ್ಷೇಪಣೆ ಸಂಖ್ಯೆ:10 ಮತ್ತು 12, ದಿನಾಂಕ: 22-06-2017.
2. ಈ ಕಛೇರಿಯ ಸಮ ಸಂಖ್ಯೆ ಸುತ್ತೋಲೆಯ ದಿನಾಂಕ: 16-09-2017 ಮತ್ತು ಸಮ ಸಂಖ್ಯೆಯ ದಿನಾಂಕ: 23-08-2018ರ ನೆನಪೋಲೆ.

******

ಸೂಚಿತ ವಿಷಯಕ್ಕೆ ಸಂಬಂಧಿಸಿದಂತೆ ಯುಜಿಸಿಯು ನಿಗದಿಪಡಿಸಿರುವ ಹೆಚ್ಚುವರಿ ವಿದ್ಯಾರ್ಹತೆಯನ್ನು ಪಡೆದಲ್ಲಿ ಮಾತ್ರ 1986 ಮತ್ತು 1996ರ ಯುಜಿಸಿ ವೇತನ ಶ್ರೇಣಿಗಳನ್ನು ವಿಸ್ತರಿಸಬಹುದಾಗಿದ್ದು, ಹಾಗೆಯೇ ಸರ್ಕಾರದ ದಿನಾಂಕ:24-12-2009ರ ಆದೇಶ ಸಂಖ್ಯೆ: ಇಡಿ/37/ ಯುಎನ್ಇ/2009ರ ಕಂಡಿಕೆ 7(viii) ಮತ್ತು 21.5ರಲ್ಲಿ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿ ವಿಸ್ತರಿಸುವ ಕುರಿತು ನೀಡಲಾಗಿರುವ ಸೂಚನೆಯ ಹಿನ್ನೆಲೆಯಲ್ಲಿ ಸಕ್ರಮಾತಿಗೊಂಡ ಸ್ಟಾಪ್-ಗ್ಯಾಪ್ ಉಪನ್ಯಾಸಕರುಗಳ ಕುರಿತು ಈ ಸುತ್ತೋಲೆಯೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ಕೋರಿರುವ ಮಾಹಿತಿಯನ್ನು ದಿನಾಂಕ:23.09.2017ರೊಳಗೆ ಸಲ್ಲಿಸುವಂತೆ ಸೂಚಿಸಲಾಗಿತ್ತು. ಸದರಿ ಮಾಹಿತಿಯ ಸಾಫ್ಟ್ ಕಾಪಿಯನ್ನು ಇ-ಮೇಲ್ ವಿಳಾಸ (dceservice1@gmail.com) ಮೂಲಕ ಸಲ್ಲಿಸಲು ಉಲ್ಲೇಖ (2)ರಲ್ಲಿ ಸೂಚಿಸಲಾಗಿತ್ತು. ಆದರೆ ಇದುವರೆವಿಗೂ ಕ್ರೋಢೀಕೃತ ಮಾಹಿತಿ ಸಲ್ಲಿಸಿಲ್ಲದಿರುವುದು ಗಮನಕ್ಕೆ ಬಂದಿರುತ್ತದೆ. ಸದರಿ ವಿಷಯವು Public Accounts Committee ಮುಂದೆ ಪ್ರಸ್ತುತಪಡಿಸಲಾದಲ್ಲಿ ವಿಷಯವು ತೀವ್ರ ಸ್ವರೂಪವನ್ನು ಪಡೆದುಕೊಳ್ಳಲಿರುವುದರಿಂದ ತುರ್ತಾಗಿ ಅಗತ್ಯ ಮಾಹಿತಿಯನ್ನೊಳಗೊಂಡಂತೆ ವರದಿಯನ್ನು ಈ ಕಛೇರಿಗೆ ಸಲ್ಲಿಸುವಂತೆ ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ಮುಂದಿನ ಆಗು-ಹೋಗುಗಳಿಗೆ ತಮ್ಮನ್ನೇ ನೇರ ಹೊಣೆಗಾರರನ್ನಾಗಿ ಪರಿಗಣಿಸಲಾಗುವುದು

ತಮ್ಮ ವಿಶ್ವಾಸಿ

ಕಾಲೇಜು ಶಿಕ್ಷಣ ನಿರ್ದೇಶಕರು

ಪ್ರತಿಗಳು:

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ(ಉನ್ನತ ಶಿಕ್ಷಣ), ಬಹುಮಹಡಿ ಕಟ್ಟಡ, ಬೆಂಗಳೂರು-ಮಾಹಿತಿಗಾಗಿ
2. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
3. ಆಯುಕ್ತರ ಆಪ್ತಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
4. ನಿರ್ದೇಶಕರ ಆಪ್ತಶಾಖೆ, ಕೇಂದ್ರ ಕಛೇರಿ, ಬೆಂಗಳೂರು.

ಮ.ತಿ.ನೋ

85-AG Objection

5. ಮುಖ್ಯಆಡಳಿತಾಧಿಕಾರಿಗಳ ಆಪ್ತ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು.
6. ಮ್ಯಾನೇಜರ್/ಅಧೀಕ್ಷಕರು, ಮಾಹಿತಿ ಮತ್ತು ತಂತ್ರಜ್ಞಾನ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ವೆಬ್‌ಸೈಟ್‌ನಲ್ಲಿ ಪ್ರಕಟಿಸುವುದು.
7. ಕಛೇರಿ ಪ್ರತಿ.